ಕೂರಿಸಿದೆ. ತಂಗಿಯನ್ನು ಗದರಿಸಿದ್ದಕ್ಕೆ ಅಣ್ಣ ದುರುಗುಟ್ಟಿ ನನ್ನ ನೋಡಿದ್ದೂ ಆಯ್ತು. ಇನ್ನೂ ಹಾಸನ ತಲುಪಿಲ್ಲ.

ಆಗಲೇ 'ಸೂಸು ಸೂಸು' ಅಂತ ಕಾಲು ಗಟ್ಟಿಯಾಗಿ ಸೆಟೆದಂತೆ ಮಾಡಿಕೊಂಡು ಕೈಯಿಂದ ತನ್ನ ಸೂಸು ಸ್ಥಳವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಶುರು ಮಾಡಿದಳು. ಅವಳದೊಂದು ಅಭ್ಯಾಸ. ಹಗ್ಗೀಸ್ ಇದ್ದರೂ ಅದರಲ್ಲಿ ಮಾಡದೇ ಕುಕ್ಕುರು ಕುಳಿತೇ ಮಾಡಬೇಕಿತ್ತು. ಬಸ್ಸು ಹಾಸನ ತಲುಪುವುದೇ ತಡ. ಇವಳ ಸೂಸು ವರಾತವೂ ಹೆಚ್ಚಿ ಬಸ್ಸಿಂದಿಳಿದವಳೇ ಮಗನನ್ನು ಲಗ್ಗೇಜ್ ಜೊತೆಗೆ ನಿಲ್ಲಿಸಿ ಇವಳನ್ನು ನಿಲ್ದಾಣದ ಶೌಚಾಲಯಕ್ಕೆ ಕರೆದುಕೊಂಡು ಹೋದೆ.

ಅಲ್ಲಿಂದ ರಾಚುತ್ತಿದ್ದ ಕೆಟ್ಟ ವಾಸನೆಗೆ ಮೂಗು ಗಟ್ಟಿ ಹಿಡಿದು ಮಗಳ ಒನ್ನಿನ ಅವಸರಕ್ಕೆ ವೇಗವಾಗಿ ಕಾಲು ಹಾಕುತ್ತಾ ತಲುಪಿ, ಕೊಳಕು ಕಮೋಡಿನ ಮೇಲೆ ನೀರು ಹುಯ್ದು ಶುಚಿ (?) ಮಾಡಿ ಇವಳಿಗೆ ಒನ್ ಮಾಡಲು ಹೇಳಿ ಆಚೆ ನಿಂತೆ. ನಾನೂ ಹೋಗಿಬಂದಿದ್ದರೆ ಆಗ್ತಿತ್ತು ಅಂತ ಇನ್ನೊಂದು ಟಾಯ್ಲೆಟ್ ಬಾಗಿಲು ತೆಗೆದರೆ ಸಾಕ್ಷಾತ್ ನರಕ ದರ್ಶನ. ವಾಕರಿಸಿ ಹಾಗೆ ಬಾಗಿಲು ಹಾಕಿದವಳಿಗೆ ಹಿಂದೊಮ್ಮೆ ಹೀಗೆ ಅವಸರಕ್ಕೆ ಕೊಳಕು ಕಮೋಡನ್ನೇ ಬಳಸಿ ಹದಿನೈದು ದಿವಸ ಸೋಂಕಿನಿಂದಾಗಿ ನರಳಿದ್ದು; ನೋವು, ಆಸ್ಪತ್ರೆಯ ವಿಚಿತ್ರ ಪರೀಕ್ಷೆಗಳು, ಪ್ರಶ್ನೆಗಳು, ಸುಸ್ತು ನೆನಪಾಯಿತು. ತಡೆದರೂ ಚಿಂತೆಯಿಲ್ಲ, ಕೊಳಕು ಕಮೋಡುಗಳನ್ನ ಉಪಯೋಗಿಸಬಾರದೆಂದು ಕೊಳ್ಳುವಾಗಲೇ ಮಗಳು, 'ಅಮ್ಮಾ... ಅದೂ ಬಂತೂ...' ಅಂತ ಅಳತೊಡಗಿದಳು. ದೇವರೇ..! 'ಸರಿ ಮುಗಿಸು' ಎನ್ನುತ್ತಾ ಎಲ್ಲ ಮುಗಿಸಿ ಅವಳನ್ನು ತೊಳೆಸಿಕೊಂಡು ಬರುವಷ್ಟರಲ್ಲಿ ಹನ್ನೆರಡರ ಮಗ, 'ಅಮ್ಮ ಬಿಟ್ಟು ಹೋಗಿದೆ' ಅಂತ ಹೋ ಅಂತ ಅಳ್ತಿದ್ದ. ಆಗಿನ ಅವನ ವಯಸ್ಸಿಗೆ ಹತ್ತು ನಿಮಿಷ ಹತ್ತುಗಂಟೆಯಷ್ಟೇ ದೀರ್ಘವಾಗಿದ್ದರೂ ಆಗಿರಬಹುದು. ಸುತ್ತಲೂ ಒಂದಷ್ಟು ಮಂದಿ ಅವನನ್ನು ಸಮಾಧಾನಪಡಿಸ್ತಿದ್ರು. ನಾ ಹೋದ ಒಡನೆ ಮಗ ತಬ್ಬಿ 'ನಮ್ಮಮ್ಮ ನಮ್ಮಮ್ಮ' ಎನ್ನುತ್ತ ಸಂಭ್ರಮಿಸಿದ. ಅಲ್ಲಿದ್ದವರಲೊಬ್ಬರು, 'ಏನಮ್ಮಾ ಮಗುವನ್ನು ಹೀಗೆ ಬಿಟ್ಟು ಹೋಗಬಾರದು ಅನ್ನೋ ಜ್ಞಾನ ಬೇಡ್ವಾ' ಅಂದರು.

ನಾ ಏನೂ ಮಾತಡಲಿಲ್ಲ. ಮಗನ ಕೈಯಲ್ಲಿ ಅವರು ಕೊಟ್ಟ ಬಿಸ್ಕತ್ತು ಇತ್ತು. ಬೆಂಗಳೂರು ಬಸ್ಸು ಹತ್ತಿ ಸೀಟು ಹುಡುಕಿ ಅದಲ್ಲಾ ಇದು, ಇದಲ್ಲ ಅದು, ನಂಗೆ ಕಿಟಕಿ, ನಂಗೆ ಕಂಬ ಅಂತೆಲ್ಲಾ ಕಿರಿಕಿರಿ ಮಾಡೋ ಮಕ್ಕಳನ್ನು ಸರಿ ಮಾಡಿ ಸದ್ಯಕ್ಕೆ ಒಪ್ಪಿತವಾಗುವ ಜಾಗದಲ್ಲಿ ಕೂರಿಸಿ ಒಂದು ನಿಮಿಷ ಕಣ್ಣುಮುಚ್ಚಿದೆ. ಇನ್ನೂ ಪೂನ ತಲುಪುವಷ್ಟರಲ್ಲಿ ಏನೇನು ಅವಾಂತರಗಳೋ ಎಂದುಕೊಳುವಾಗಲೇ, 'ಅಮ್ಮ ಹೊಟ್ಟೆ ಹಸೀತಾ ಇದೆ' ಅಂದಳು ಮಗಳು. ಬ್ಯಾಗಿನಲ್ಲಿ ಮನೆಯಿಂದ ತಂದಿದ್ದ ಚಿತ್ರಾನ್ನ ಇಬ್ಬರಿಗೂ ತಿನ್ನಿಸಿ, ನಾನು ಎರಡು ತುತ್ತು ತಿನ್ನುವಷ್ಟರಲ್ಲಿ ಮಗಳು 'ಜ್ಯೂತು' ಅಂತ ಶುರು ಮಾಡಿದಳು.

ಮುಂದಿನ ಸೀಟಿನಲಿದ್ದ ಚಿಕ್ಕ ಹುಡುಗ ಇವಳನ್ನೇ ನೋಡುತ್ತ ಕೋಕಿನ ಬಾಟಲು ಎತ್ತುತ್ತಿದ್ದ. ಅವಳಿಗೆ ಜ್ಯೂತಿನ ಬಾಟಲಿನಲ್ಲಿ ಬೆಕ್ಕು ಹೇಗೆ ಕಕ್ಕ ಮಾಡಿರುತ್ತದೆ ಅಂತೆಲ್ಲಾ ಹೇಳಿ ಅದನ್ನು ಕುಡಿದರೆ ಕೊತ್ತಿಯಾಗ್ತಾರೆ ಅಂತಲೂ ಹೇಳಿದ ಮೇಲೆ ಬೇಡವೆಂದು ತೀರ್ಮಾನಿಸಿದವಳು, ಸ್ವಲ್ಪ ಹೊತ್ತಿಗೆ 'ಮತ್ತೆ ಅವನ್ಯಾಕೆ ಮಿಯಾ ಅಂತಿಲ್ಲ' ಅಂದಳು. ಅದಕ್ಕೆ ಇನ್ನೊಂದು ಕಥೆ ಕಟ್ಟಿ ಮಗನನ್ನು ನೋಡಿದೆ. ಅವನಿಗೂ ಕೋಕ್ ಬೇಕಾಗಿ 'ಪ್ಲೀಸ್' ಅಂದ. ಸುಮ್ಮನೇ ಒಮ್ಮೆ ಕಣ್ಣುಬಿಟ್ಟೆ.

ಇಳಿದುಹೋಗಲಾರದ ಸಂಕಟ, ಕುಡಿದಷ್ಟೂ ಹೆಚ್ಚುವ ಸೂಸುವಿನ ಒತ್ತಡ, ಪರ್ಸಿನಲ್ಲಿರುತ್ತಿದ್ದ ಲೆಕ್ಕದಷ್ಟೇ ಹಣ ಹಾಗೆ ಮಾಡಿಸಿತ್ತು ನನ್ನ. ಎಲ್ಲ ಸರಿಹೋಗಿ ಮಕ್ಕಳು ಸಣ್ಣಗೆ ಜೊಂಪಿನಲಿದ್ದುದ್ದು ಕಂಡು ಸಮಾಧಾನವಾಯಿತು. ಅಷ್ಟೊತ್ತಿಗಾಗಲೇ ಮನೆಯಿಂದ ಹೊರಟು ಎರಡು ತಾಸು ಆಗಿತ್ತು. ನನಗೆ ಅವಸರ ಶುರುವಾಯ್ತು. ತುಸು ಹೊತ್ತು ಕಳೆಯುತ್ತಲೂ ಅವಸರ ಹೆಚ್ಚಾಗಿ ತಳಹೊಟ್ಟೆ ನೋಯಲು ಶುರುವಾಗಿ, ಗಮನ ಬೇರೆಡೆ ತಿರುಗಿಸಲು ಹತ್ತು, ಒಂಬತ್ತು, ಎಂಟು ಅಂತ ಎಣಿಸತೊಡಗಿದೆ. ಅದೂ ನಿಮಿಷದಲ್ಲೇ ಮುಗಿದು ಅವಸರ ಇನ್ನೂ ಹೆಚ್ಚಾಗತೊಡಗಿತು.

ಜೊತೆಗೆ ತೂಕಡಿಸುತ್ತಿದ್ದ ಮಗಳು ತೊಡೆಗೆ ಶಿಫ್ಟ್ ಆಗಿ ಗಳಿಗೆಗೊಮ್ಮೆ ಭಂಗಿ ಬದಲಿಸಿ ಹೊಟ್ಟೆಯ ಒತ್ತಡ ಹೆಚ್ಚಾಗಿ ನರಕದ ಅನುಭವ. ಬೆಂಗಳೂರು ತಲುಪಿದ ಕೂಡಲೇ ಲಗೇಜು ರೂಮಿನಲ್ಲಿ ಲಗೇಜು ಇರಿಸಿ ಒನ್ನಿಗೆ ಹೋಗಿಬರಬೇಕು ಅಂತ ತಿರ್ಮಾನಿಸಿಕೊಂಡು, ತಡೆಯಬಹುದಾದ ಸರ್ವ ಪ್ರಯತ್ನಗಳನ್ನೂ ಮಾಡುತ್ತಿರುವಾಗ ಬಸ್ಸು ಎರಡುಮೂರು ಬ್ರೇಕು ಹಾಕಿ ನಿಂತುಹೋಯಿತು. ಗಾಬರಿಯಾಯ್ತು. ಪೂನಾ ಬಸ್ಸು ಸರಿಯಾಗಿ ಮೂರೂವರೆಗೆ ಸ್ಟ್ಯಾಂಡಿನಲ್ಲಿ ಇರೋವಾಗ ಅರ್ಧ ಗಂಟೆ ಮೊದಲಾದರೂ ನಾವು ಅಲ್ಲಿರಬೇಕು.

ಬಸ್ಸು ಕೆಟ್ಟು ನಿಂತಿತಲ್ಲ ಅಂತ ಸುತ್ತೆಲ್ಲಾ ನೋಡಿದೆ. ಅಚ್ಚರಿಯೆಂಬಂತೆ ನನ್ನ ಮೂತ್ರದ ಅವಸರ ಕಡಿಮೆಯಾಗಿತ್ತು. ಮಗನಿಗೆ ಬಸ್ಸು ಕೆಟ್ಟಿರುವ ಸುದ್ದಿ ಮಸ್ತು ಅನಿಸಿ ಎದ್ದು – ಡ್ರೈವರ್, ಕೆಳಗಿಳಿದ ಜನ, ಟೈಯರ್ರು ತದೇಕದಲ್ಲಿ ಗಮನಿಸತೊಡಗಿದ. ಅವನಿಗೆ ರಿಪೇರಿ ಆಗುತ್ತಿರುವ ಸಂಗತಿಗಳೆಂದರೆ ಕಣ್ಣು ಮತ್ತು ಮನಸ್ಸು ಎರಡೂ ಚುರುಕು. ಮಗಳು ಒಮ್ಮೆ ಜೋರು ಆಕಳಿಸಿ ನನ್ನ ಹೊಟ್ಟೆಗೆ ಒತ್ತಿ ಈ ಬದಿ ತಿರುಗಿದ್ದೇ ನನ್ನ ಅವಸರ ಹೆಚ್ಚಾಯಿತು. ಸುತ್ತಾ ನೋಡಿದೆ. ಎಲ್ಲಾದರೂ ಕರೆಗೆ ಎಡೆಯಿದೆಯೇ ಅನ್ನುವ ದೃಷ್ಟಿಯಿಂದ. ಸರ್ಕಲ್ಲಿನಂಥ ಜಾಗ, ಸಣ್ಣ ದೊಡ್ಡ ಅಂಗಡಿಗಳು.

ರಸ್ತೆಗೂ ಪಕ್ಕದ ಜಾಗಕ್ಕೂ ಮಧ್ಯೆ ಹೊಂಡದಂತ ರಚನೆ. ಅದರಲ್ಲಿ ಟನ್ನುಗಟ್ಟಲೇ ಕಚಡ. ಹೇಗೋ ಸಾಹಸಮಾಡಿ ಪಕ್ಕದ ಜಮೀನಿಗೆ ಹೋದರೂ ಎಲ್ಲೂ ಸಣ್ಣ ಮರೆಯಿಲ್ಲ. ಅದೂ ಅಲ್ಲದೆ ಬಸ್ ಬೇಗ ರಿಪೇರಿಯಾದರೆ? ಅಷ್ಟರಲ್ಲೇ ಎಲ್ಲಾ ಆದವರಂತೆ ಜನ ಒಳಗೆ ಬಂದರು. ಬಸ್ಸು ಸ್ಟಾರ್ಟ್ ಆಯ್ತು. ಬೆಂಗಳೂರಿನಲ್ಲಿ ಇಳಿದ ಕೂಡಲೇ ಮೊದಲು ಮುಗಿಸಿಕೊಳ್ಳಬೇಕು ಅಂದುಕೊಂಡು ಮಲಗಲು ಯತ್ನಿಸಿದೆ. ರಿಪೇರಿಯ ಸಮಯವನ್ನು ಸರಿದೂಗಿಸಲು ಬಸ್ಸು ತನ್ನ ಮಿತಿಯಷ್ಟು ವೇಗದಲ್ಲಿ ಓಡುತ್ತಿತ್ತು. ಅದರ ವೇಗ ನನ್ನ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಿದುದರ ಕಾರಣ ನಂಗೆ ವೇಗದ ಭಯ.

ಅಂತೂ ಇಂತೂ ಬೆಂಗಳೂರು ತಲುಪಿದಾಗ ಪೂನಾ ಬಸ್ಸಿಗೆ ಇನ್ನೂ ಹದಿನಾಲ್ಕು ನಿಮಿಷ ಬಾಕಿಯಿತ್ತು. ಸಣ್ಣದು, ದೊಡ್ಡದು ಎರಡನ್ನೂ ಗಾಢನಿದ್ದೆಯಿಂದ ಎಬ್ಬಿಸಿ ಓಡಿಸಿಕೊಂಡು, ನಿಂತಿದ್ದ ಪೂನಾ ಬಸ್ಸಿನ ಕಂಡಕ್ಟರನಿಗೆ ಟಿಕೇಟು ತೋರಿಸಿ, ಲಗೇಜು ಇರಿಸಿ, ಮಕ್ಕಳನ್ನು ಕೂರಿಸಿ, ನಾನು ವಾಶ್ರೂಮಿಗೆ ಹೋಗಬೇಕು ಅನ್ನುವಷ್ಟರಲ್ಲಿ ಮಗಳು 'ಅಮ್ಮಾ' ಅಂತ ಅಳತೊಡಗಿದಳು. ಅವಳ ಪ್ಯಾಡು ಕಿರಿಕಿರಿಯಾಗಿ ಕೊನೆಗೆ ಅದನ್ನು ಬಿಚ್ಚಿ, ಇಳಿಯಬೇಕೆನ್ನುವಷ್ಟರಲ್ಲಿ ಮಗ 'ಅಮ್ಮ ನಂಗೂ ಸುಸ್ಸು ಬರ್ತಿದೆ' ಅಂದ ಸಣ್ಣ ಸ್ವರದಲ್ಲಿ. ಅವನಿಗೆ ಅಮ್ಮನ ಗೋಳಾಟ ಅರಿವಾಗ್ತಿತ್ತು.

ಹೌದಲ್ವಾ. ಅವನೂ ಬೆಳಗಿಂದ ಹೋಗಿಲ್ಲ... ಸರಿ, ಸೀಟಿನಮೇಲೆ ಒಂದಷ್ಟು ವಸ್ತುಗಳನ್ನು ಹರಡಿ ಎರಡನ್ನೂ ಇಳಿಸಿಕೊಂಡು ಕಂಡಕ್ಟರ್‌ನಿಗೆ ಹೇಳಲು ಹೋದಾಗ, 'ಇನ್ನು ಆರು ನಿಮಿಷ ಅಷ್ಟೆ. ಬೇಗ ಬರಬೇಕು. ಕಾಯೋದು ಗೀಯೋದು ಇಲ್ಲ' ಅಂದ. ಯಾಕೋ ಮನುಷ್ಯತ್ವನೇ ಇಲ್ಲದೇ ಇರುವವನ ಥರ ಅನಿಸ್ತು. ಸರಿ... ಮಕ್ಕಳನ್ನು ಕರೆದುಕೊಂಡು ಬಸ್‌ಸ್ಟ್ಯಾಂಡ್‌ನ ಆ ಮೂಲೆಯಲ್ಲಿರೋ ಶೌಚಾಲಯಕ್ಕೆ ಹೊರಟೆ. ಮಗನ ಅವಸರ ಮೇರೆ ಮೀರಿ, ಅವನು ಕಾಲು ಒಳಮುಖವಾಗಿ ಹಾಕುತ್ತ ತಡೆಯಲು ಯತ್ನಿಸುತ್ತಿದ್ದ.

'ಪುಟ್ಟೂ... ಏನಾಗಲ್ಲ. ಆರಾಮಾಗಿ ಬಾ. ಬೇಗನೇ ಹೋಗೋಣಾ' ಎಂದೆ. ಮಗಳು ನನ್ನ ಸೊಂಟದ ಮೇಲೆ ಆರಾಮು ಆಸೀನಳಾಗಿ ತನ್ನ ಕಾಲುಗಳಿಂದ ನನ್ನ ಎರಡೂ ಪಕ್ಕೆಗಳಿಗೆ ಸಣ್ಣಗೆ ಒದೀತಾ ನನ್ನ ನೋವನ್ನೂ, ಅವಸರವನ್ನೂ ಜಾಸ್ತಿ ಮಾಡ್ತಿದ್ಳು. ಮಗ

